# ಕರ್ನಾಟಕ ಸರ್ಕಾರ

## ಕೋವಿಡ್-19 ಕುರಿತ ಮಧ್ಯಾಹ್ನದ ಪರಿಸ್ಥಿತಿಯ ಮಾಹಿತಿ

**ದಿನಾಂಕ-27-03-2020** **ಪರಿಸ್ಥಿತಿ ಬೆಳಿಗ್ಗೆ-8.00 ವರೆಗೆ**

3 ಮರಣ ಮತ್ತು 5 ಗುಣಮುಖ ಬಿಡುಗಡೆಯನ್ನು ಒಳಗೊಂಡು ಇವತ್ತಿನವರೆಗೂ ಒಟ್ಟಾರೆ 62 ಕೋವಿಡ್–19 ಖಚಿತ ಪ್ರಕರಣಗಳು ಗುರುತಿಸಲಾಗಿದೆ.

1. ದಿನಾಂಕ 26.03.2020 ಸಂಜೆ 5:00 ಗಂಟೆಯಿಂದ ದಿನಾಂಕ 27.03.2020 ಬೆಳಿಗ್ಗೆ 8.00 ರವರೆಗೆ 7 ಹೊಸ ಖಚಿತ ಪ್ರಕರಣಗಳನ್ನು ಗುರುತಿಸಲಾಗಿದೆ. ವಿವರ ಕೆಳಗಿನಂತಿದೆ.

- P56: 10 ತಿಂಗಳ ಗಂಡು ಮಗು, ದಕ್ಷಿಣ ಕನ್ನಡ ಜಿಲ್ಲೆಯ ನಿವಾಸಿ, ಯಾವುದೇ ಕೋವಿಡ್–19 ಪ್ರಭಾವಿತ ದೇಶಕ್ಕೆ ಪ್ರಯಾಣಿಸಿದ ಹಿನ್ನಲೆಯಿರುವುದಿಲ್ಲ. ಪ್ರಕರಣವನ್ನು ದಕ್ಷಿಣ ಕನ್ನಡ ಜಿಲ್ಲೆಯ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ. ಪ್ರಥಮ ಮಾಹಿತಿಗಳಂತೆ ಪೋಷಕರು ಮಗುವಿನೊಂದಿಗೆ ಕೆಲವು ದಿನಗಳ ಹಿಂದೆ ಕೇರಳ ರಾಜ್ಯಕ್ಕೆ ಭೇಟಿ ನೀಡಿರುವ ಪ್ರಯಾಣ ಹಿನ್ನಲೆಯಿರುತ್ತದೆ. ವಿಸ್ತೃತ ಮಾಹಿತಿಯೂ ಕಲೆಹಾಕಿ ತಪಾಸಣೆಯೂ ಪ್ರಗತಿಯಲ್ಲಿರುತ್ತದೆ. ಹಾಗೂ 6 ಪ್ರಾಥಮಿಕ ಸಂಪರ್ಕ (Primary Contact) ವ್ಯಕ್ತಿಗಳನ್ನು ಗುರುತಿಸಲಾಗಿ ಇವರುಗಳನ್ನು ಗೃಹ ಕ್ವಾರಂಟೈನ್ ಮಾಡಲಾಗಿರುತ್ತದೆ.

- P57: 20 ವರ್ಷದ ಮಹಿಳೆ ಬೆಂಗಳೂರು ನಿವಾಸಿಯಾಗಿದ್ದು, ಕೋಲಂಬೋ ದೇಶಕ್ಕೆ ಪ್ರಯಾಣ ಬೆಳೆಸಿ ದಿನಾಂಕ 15.03.2020 ರಂದು ಭಾರತಕ್ಕೆ ಹಿಂದಿರುಗಿರುವ ಪ್ರಯಾಣ ಹಿನ್ನಲೆಯಿರುತ್ತದೆ. ಪ್ರಕರಣವನ್ನು ಬೆಂಗಳೂರಿನ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.

- P58: 25 ವರ್ಷದ ಮಹಿಳೆ ಬೆಂಗಳೂರು ನಿವಾಸಿಯಾಗಿದ್ದು, ಲಂಡನ್ ದೇಶಕ್ಕೆ ಪ್ರಯಾಣ ಬೆಳೆಸಿ ದಿನಾಂಕ 18.03.2020 ರಂದು ಭಾರತಕ್ಕೆ ಹಿಂದಿರುಗಿರುವ ಪ್ರಯಾಣ ಹಿನ್ನಲೆಯಿರುತ್ತದೆ. ಪ್ರಕರಣವನ್ನು ಬೆಂಗಳೂರಿನ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.

- P59: 35 ವರ್ಷದ ಮಹಿಳೆ ಬೆಂಗಳೂರು ನಿವಾಸಿಯಾಗಿದ್ದು P25 ರ ಸಂಪರ್ಕ ವ್ಯಕ್ತಿ (ಮನೆ ಕೆಲಸದ ಮಹಿಳೆ) ಈ ಪ್ರಕರಣವನ್ನು ಬೆಂಗಳೂರಿನ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ

- P60: 60 ವರ್ಷದ ಪುರುಷ ತುಮಕೂರು ಜಿಲ್ಲೆಯ ನಿವಾಸಿಯಾಗಿದ್ದು, ದೆಹಲಿಗೆ ರೈಲು ಮುಖಾಂತರ ದಿನಾಂಕ 13.03.2020ರಂದು ಪ್ರಯಾಣ ಬೆಳೆಸಿರುತ್ತಾರೆ. ಇವರು ದಿನಾಂಕ 27.03.2020ರಂದು ಬೆಳಿಗ್ಗೆ ತುಮಕೂರು ಜಿಲ್ಲೆಯ ನಿಗದಿತ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ. 24 ಹೈರಿಸ್ಕ್ ಪ್ರಾಥಮಿಕ ಸಂಪರ್ಕ ವ್ಯಕ್ತಿಗಳನ್ನು ಗುರುತಿಸಲಾಗಿರುತ್ತದೆ. ಇರುಗಳಲ್ಲಿ 13 ಪ್ರಕರಣಗಳನ್ನು ನಿಗಧಿತ ಆಸ್ಪತ್ರೆಗಳಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ ಮತ್ತು 8 ನೆಗೆಟಿವ್ ಪ್ರಕರಣಗಳು ಹಾಗೂ 3 (ವೈದ್ಯಕೀಯ ಸಿಬ್ಬಂದಿ) ಪ್ರಕರಣಗಳನ್ನು ಮನೆ ಕ್ವಾರಂಟೈನ್ ಮಾಡಲಾಗಿರುತ್ತದೆ.

- P61: 33 ವರ್ಷದ ಮಹಿಳೆ ಬೆಂಗಳೂರು ನಿವಾಸಿಯಾಗಿದ್ದು, P25ರ ಸಂಪರ್ಕ ವ್ಯಕ್ತಿ (ಮನೆ ಕೆಲಸದ ಮಹಿಳೆ) ಈ ಪ್ರಕರಣವನ್ನು ಬೆಂಗಳೂರಿನ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.

- P62: 22 ವರ್ಷದ ಪುರುಷ, ಉತ್ತರ ಕನ್ನಡ ಜಿಲ್ಲೆಯ ನಿವಾಸಿಯಾಗಿದ್ದು, ದುಬೈ ದೇಶಕ್ಕೆ ಪ್ರಯಾಣ ಬೆಳೆಸಿರುವ ಹಿನ್ನಲೆಯಿರುತ್ತದೆ. ಪ್ರಕರಣವನ್ನು ಉತ್ತರ ಕನ್ನಡ ಜಿಲ್ಲೆಯ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.

* P1 ಮತ್ತು P3 ಪ್ರಕರಣಗಳು ಗುಣಮುಖ ಹೊಂದಿ ಆಸ್ಪತ್ರೆಯಿಂದ ಬಿಡುಗಡೆಗೊಳಿಸಲಾಗಿರುತ್ತದೆ.

2. ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ದಿನಾಂಕ 23.03.2020ರಂದು ರಾಜ್ಯದ ಎಲ್ಲಾ ಜಿಲ್ಲೆಗಳ ಹಿರಿಯ ಅಧಿಕಾರಿಯವರುಗಳೊಂದಿಗೆ ರಾಜ್ಯ ಮಟ್ಟದ ವಿಡಿಯೋ ಕಾನ್ಫರೆನ್ಸ್ ಸಭೆಯನ್ನು ನಡೆಸಲಾಗಿ, ರಾಜ್ಯದಲ್ಲಿನ ಸಧ್ಯ ಸ್ಥಿತಿ ಮತ್ತು ಕೋವಿಡ್ –19 ನ್ನು ಕಟ್ಟುಹಾಕುವ ನಿಟ್ಟಿನಲ್ಲಿ ಭಾರತ ಸರ್ಕಾರದಿಂದ ನೀಡಿರುವ ಮಾರ್ಗ ಸೂಚಿಗಳನ್ವಯ ಅನುಷ್ಠಾನ ಕುರಿತು ಪರಿಶೀಲನೆ ನಡೆಸಲಾಯಿತು.

3. ರಾಜ್ಯ ಸರ್ಕಾರವು (ಪೋಲಿಸ್ ಇಲಾಖೆ), ಇ–ಕಾರ್ಮಸ್ ಜಿಲ್ಲರೆ ವ್ಯಾಪರ/ನಿಯಂತ್ರಕರು ಮತ್ತು ಆನ್‌ಲೈನ್ ಸೇವೆಗಳನ್ನು ಕಾರ್ಯವಹಿಸಲು ಅನುಮತಿ ನೀಡಿದೆ. ಆದರೆ ಅವರುಗಳು ಸಿಬ್ಬಂದಿ ಮತ್ತು ವಾಹನಗಳಿಗೆ ಬೆಂಗಳೂರು ಜಿಲ್ಲೆಯ 8 ಉಪ ಆಯುಕ್ತರು – ಪೋಲಿಸ್(ಎಲ್ & ಓ) ರವರಿಂದ ಅಧಿಕೃತ ಪಾಸ್‌ಗಳನ್ನು ಹೊಂದಿರುವುದು ಕಡ್ಡಾಯವಿರುತ್ತದೆ.

4. ರಾಜ್ಯ ಸರ್ಕಾರವು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಪ್ರಯಾಣಿಕರು ಮತ್ತು ಕ್ವರಂಟೈನ್ ನಿಂದ ಬಿಡುಗಡೆ ಹೊಂದಿದ ವ್ಯಕ್ತಿಗಳ ಕುಟುಂಬ ಸದಸ್ಯರುಗಳಿಗೆ ಮಾರ್ಗ ಸೂಚಿಗಳನ್ನು ಪ್ರಕಟಿಸಿರುತ್ತದೆ.

5. ಭಾರತ ಸರ್ಕಾರವು ಪ್ರಯಾಣಕ್ಕೆ ಕುರಿತಂತೆ ಸುತ್ತೋಲೆಯನ್ನು ನೀಡಿರುತ್ತದೆ ಮತ್ತು ಕೋವಿಡ್–19 ಸಂಬಂಧಿತ ವಿಸಾ ನಿರ್ಭಂದನೆಗಳನ್ನು ಹೊರಡಿಸಿದೆ (No.4/1/2020-IR ದಿ.26.03.2020) ಅಂತರಾಷ್ಟ್ರೀಯ ಎಲ್ಲಾ ವಾಣಿಜ್ಯ ಪ್ರಯಾಣ ಸೇವೆಗಳನ್ನು ದಿನಾಂಕ 14.04.2020ರ ವರೆಗೆ 18.30hrs GMT ರ ವರೆಗೆ ಸ್ಥಗಿತಗೊಳಿಸಲು ತೀರ್ಮಾನಿಸಿದೆ. ಆದರೆ, ಈ ನಿರ್ಭಂಧನೆಯು ಎಲ್ಲಾ ಅಂತರಾಷ್ಟ್ರೀಯ ಕಾರ್ಗೋ ಸೇವೆ ಮತ್ತು DGCA ಅನುಮತಿ ಪಡೆದ ವಿಮಾನ ಸೇವೆಗಳಿಗೆ ಅನ್ವಯಿಸುವುದಿಲ್ಲ.

6. Gazette Notification CG-DL-E-26.03.2020-218927 date d 26.03.2020ರ ಅನ್ವಯ ಕೇಂದ್ರ ಸರ್ಕಾರವು ***Hydrochlorquine*** ವುಳ್ಳ ಯಾವುದೇ ಔಷಧಿಗಳನ್ನು, ಚಿಲ್ಲರೆ ವ್ಯಾಪರಕ್ಕೆ *ಔಷಧಿ ಮತ್ತು ಸೌಂದರ್ಯವರ್ಧಕ ನಿಯಮಗಳಿಗೆ 1945ರ ವೇಳಾಪಟ್ಟಿ ಹೆಚ್.1* ರಲ್ಲಿ ನಿರ್ಧಿಷ್ಟಪಡಿಸಿದ ಔಷಧಗಳ ಮಾರಾಟದ ಷರತ್ತುಗಳಿಗೆ ಅನುಗುಣವಾಗಿರಬೇಕು ಮತ್ತು ವೈದ್ಯರ prescription ಚೀಟಿ ಮೇರೆಗೆ ಮಾತ್ರವೇ ವ್ಯಾಪಾರ / ಮಾರಟ ಮಾಡಬಹುದಾಗಿರುತ್ತದೆ ಎಂಬ ಆದೇಶ ಮತ್ತು ನಿರ್ದೇಶನವನ್ನು ನೀಡಿರುತ್ತದೆ.

7. ಬಡ ಜನತೆ ಅನುಕೂಲಕ್ಕೆ ಮತ್ತು ಕೋವಿಡ್–19 ರ ವಿರುದ್ಧ ಹೋರಾಡುವ ನಿಟ್ಟಿನಲ್ಲಿ, ಮಾನ್ಯ ಆರ್ಥಿಕ ಸಚಿವರು, ಭಾರತ ಸರ್ಕಾರ ರವರು ರೂ.1.70 ಲಕ್ಷ ಕೋಟಿಗಳ ಪರಿಹಾರ ನಿಧಿಯನ್ನು ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನೆ ಅಡಿ ಘೋಷಿಸಿರುತ್ತಾರೆ.

8. ಐ.ಸಿ.ಎಂ.ಆರ್., ಎಂ.ಓ.ಹೆಚ್.ಎಫ್.ಡಬ್ಲ್ಯೂ ರವರ ಪ್ರಸ್ತಾವನೆಯಂತೆ ಸರ್ಕಾರಿ ಕ್ಯಾಂಪ್‌ಗಳಲ್ಲಿ ಕ್ವಾರನ್‌ಟೈನ್‌ನಲ್ಲಿರುವ 60 ವರ್ಷದ ಮೇಲ್ಪಟ್ಟ ವ್ಯಕ್ತಿಗಳಿಗೆ ಟೆಸ್ಟ್ ನೆಗೆಟಿವ್ ಬಂದರೆ ಮಾತ್ರ ಹಾಗೂ ಯಾವುದೇ ಸೋಂಕು ಲಕ್ಷಣಗಳು ಇಲ್ಲದಿದ್ದರೆ ಮಾತ್ರ ಕ್ವಾರನ್‌ಟೈನ್‌ನಿಂದ ಬಿಡುಗಡೆಗೊಳಿಸುವುದು ಮತ್ತು ಬಿಡುಗಡೆಗೊಂಡ 7 ದಿನದಗಳ ಕಾಲವರೆಗೂ ಸದರಿಯವರು ಮನೆ ಕ್ವಾರನ್‌ಟೈನ್‌ನಲ್ಲಿ ಹಾಗೂ ವೈದ್ಯಕೀಯ ನಿಗಾವಣೆಯಲ್ಲಿ ಇರತಕ್ಕದ್ದು. ಒಂದು ವೇಳೆ ಸೋಂಕಿನ ಲಕ್ಷಣಗಳು ಕಂಡುಬಂದಲ್ಲಿ ತುರ್ತಾಗಿ ವೈದ್ಯಕೀಯ ಸೇವೆಗಾಗಿ ನಿಗಧಿತ ಆಸ್ಪತ್ರೆಗಳಿಗೆ ಸಂಪರ್ಕಿಸುವುದು.

9. ಕರ್ನಾಟಕ ಸರ್ಕಾರದ ಆದೇಶದ ಮೇರೆಗೆ ನೊಂದಾಯಿತ ಖಾಸಗಿ ವೈದ್ಯರು ಟೆಲಿ–ಮೆಡಿಸನ್ ಮುಖಾಂತರ ಕೆಲವು ನಿರ್ಬಂಧನೆಗಳೊಂದಿಗೆ ಚಿಕಿತ್ಸೆ ನೀಡಲು ಅನುವು ಮಾಡಿಕೊಡಲಾಗಿದೆ. ಟೆಲಿ–ಮೆಡಿಸನ್ ಸಲಹೆಗಳಿಗಾಗಿ ಮಾರ್ಗಸೂಚಿಗಳು ಕೆಳಕಂಡ ಅಂತರಜಾಲದಲ್ಲಿ ಲಭ್ಯವಿರುತ್ತದೆ website: https://www.mohfw.gov.in/pdf/telemedicine.pdf.

10. ಕರೋನಾ ನಿಗಾವಣೆ / ಮೊಬೈಲ್ ಅಪ್ಲಿಕೇಷನ್‌ನ್ನು www.karnataka.gov.in. ಈ ಮೂಲಕ ದೌನಲೋಡ್ ಮಾಡಿಕೊಳ್ಳಬಹುದಾಗಿದೆ. ಸದರಿ ಅಪ್ಲಿಕೇಷನ್‌ನಲ್ಲಿ ಕೋವಿಡ್–19 ರೋಗಿಯು ಪ್ರಯೋಗಶಾಲ ಪಲಿತಾಂಶಕ್ಕೆ ಮೊದಲು 14 ದಿವಸ ಪ್ರಯಾಣ ಮಾಡಿದ ವಿವಿಧ ಸ್ಥಳ / ಪ್ರದೇಶಗಳ ಮಾಹಿತಿ ನಿಮಗೆ ಲಭ್ಯವಾಗುತ್ತದೆ. ಅದರ ಜೊತೆಗೆ ಫಸ್ಟ್ ರೆಸ್‌ಪಾಂಡರ್ ಹಾಗೂ ಸಹಾಯವಾಣಿಗಳ ಸಂಖ್ಯೆ ನಿಮಗೆ ಲಭ್ಯವಾಗುತ್ತದೆ.

11. ಕೋವಿಡ್–19 ಎಲ್ಲಾ ರೀತಿಯ ಅನುಮಾನಗಳಿಗೆ ಸಹಾಯವಾಣಿ ಸಂಖ್ಯೆ 104 ರನ್ನು ಸಂಪರ್ಕಿಸಬಹುದಾಗಿದೆ.

**ನಿಮಗೆ ಸಹಾಯ ಮಾಡಲು ನಮಗೆ ನೆರವು ನೀಡಿ. ನಾವೆಲ್ಲರೂ ಒಟ್ಟಾಗಿ ಕೋವಿಡ್–19 ವಿರುದ್ಧ ಹೋರಾಡೋಣ.**

ಸಹಾಯವಾಣಿ ಸಂಖ್ಯೆ 080–46848600, 080–66692000 & 104

ಎಲ್ಲ ರೀತಿಯ ಮಾರ್ಗಸೂಚಿಗಳು ಮತ್ತು ಸಲಹೆಗಳು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಜಾಲತಾಣದಲ್ಲಿ ಲಭ್ಯವಿದೆ: https://karunadu.karnataka.gov.in/hfw/kannada/Pages/covid-19.aspx

********